# ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,ನ್ಯಾಯಾಲಯ, ಅಂಕೋಲಾ.

ಸಿ.ಸಿ. ನಂ.131/2022

(368/2018)

ಪಿ.ಡಬ್ಲ್ಯೂಃ 2

ಸಾಕ್ಷಿದಾರರ ಹೆಸರು : ಶ್ಯಾಮ್ ಸುಂದರ ಬಂಗಾರೇಶ್ವರ ಬಾಳೆಮನೆ

ತಂದೆಯ ಹೆಸರು : ಬಂಗಾರೇಶ್ವರ

ವಯಸ್ಸು : 58 ವರ್ಷ

ಉದ್ಯೋಗ : ಎಲ್.ಐ.ಸಿ. ಏಜೆಂಟ್

ವಾಸ : ನೆಲ್ಲಿಕೇರಿ, ಕುಮಟಾ

ದಿನಾಂಕಃ 12-03-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಮುಖ್ಯ ವಿಚಾರಣೆಃ** ಪಿರ್ಯಾದಿ ಪರ ಶ್ರೀಮತಿ ಎಸ್.ಎನ್.ಎಚ್. ವಕೀಲರಿಂದಃ

1. ನಾನು ಫೊರಸ್ ಫುಡ್ಸ್ , ಕಾರೆಬೈಲ್ ಅಂಕೋಲಾದಲ್ಲಿ ಮಾರ್ಚ 2017 ರಿಂದ ನವೆಂಬರ್ 2018 ರವರೆಗೆ ಲೆಕ್ಕಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೆ. ಫೊರಸ್ ಫುಡ್ಸ್ ನಲ್ಲಿ ಸಿಗಡಿಯನ್ನು ಸ್ವಚ್ಛ ಮಾಡಿ, ಸಂಸ್ಕರಿಸಿ, ಪ್ಯಾಕ್ ಮಾಡಿ ಮಾರಾಟ ಮಾಡಲಾಗುತ್ತದೆ. ಸದ್ರಿ ಫೊರಸ್ ಫುಡ್ಸ್‌ಗೆ ಸಿಗಡಿಯನ್ನು ಸ್ವಚ್ಛ ಮಾಡಲು ಮತ್ತು ಸಂಸ್ಕರಿಸಲು ಆಳುಗಳನ್ನು ಪಿರ್ಯಾದಿ ಮತ್ತು ಆರೋಪಿ ಪಾರ್ಟನರ್ ಶಿಪ್ ನಲ್ಲಿ ಒದಗಿಸುತ್ತಿದ್ದರು. ಪಿರ್ಯಾದಿ ಮತ್ತು ಆರೋಪಿ ಜಂಟಿಯಾಗಿ ಸದ್ರಿ ಫೊರಸ್ ಫುಡ್ಸ್‌ನ ಜೊತೆ ಲಿಖಿತ ಒಪ್ಪಂದ ಆ ಬಗ್ಗೆ ಮಾಡಿಕೊಂಡಿದ್ದರು. ಆ ಲಿಖಿತ ಒಪ್ಪಂದವನ್ನು ಫೊರಸ್ ಫುಡ್ಸ್ ನ ಪ್ರತಿನಿಧಿಯಾಗಿ ಅದರ ಮಾಲೀಕ ಬಾಸ್ಕರ ಶೆಟ್ಟಿ ಹಾಗೂ ಆರೋಪಿ ಮತ್ತು ಪಿರ್ಯಾದಿದಾರರು ಸಹಿ ಮಾಡಿದ್ದಾರೆ. ಅದಕ್ಕೆ ಸಾಕ್ಷಿಗಳಾಗಿ ಜನರಲ್ ಮ್ಯಾನೆಜರ್ ಸಿ.ಎಸ್. ಸಪ್ರೆ ಮತ್ತು ಎಚ್.ಆರ್. ಮ್ಯಾನೆಜರ್ ರಾದ

ಸಂತೋಷ್ ನಾಯಕ ರವರು ಸಹಿ ಮಾಡಿರುತ್ತಾರೆ. ಆ ರೀತಿ ಅವರು ಆಳುಗಳನ್ನು ಒದಗಿಸುತ್ತಿದ್ದ ಬಗ್ಗೆ ಹಾಜರಾತಿ ಪುಸ್ತಕದಲ್ಲಿ ನಮೂದು ಮಾಡುತ್ತಿದ್ದೆವು. ಆ ಬಗ್ಗೆ ಹಾಜರಾತಿ ಪುಸ್ತಕವನ್ನು ನಾನು ಮತ್ತು ದೇವಕಿ ರಮೇಶ್ ಹರಿಕಂತ್ರ ಬೆಟ್ಕುಳಿ ರವರು ನಿರ್ವಹಿಸುತ್ತಿದ್ದೆವು. ಆ ಹಾಜರಾತಿ ಪುಸ್ತಕದ ನಕಲನ್ನು ಆರೋಪಿ ಪಡೆದುಕೊಂಡು ಹೋಗುತ್ತಿದ್ದರು. ಸದ್ರಿ ಹಾಜರಾತಿ ಪುಸ್ತಕವನ್ನು ನಾನು ಮತ್ತು ದೇವಕಿ ರವರು ಕೈಯಲ್ಲಿ ಬರೆಯುತ್ತಿದ್ದೆವು. ಒಬ್ಬ ಆಳಿಗೆ ಸ್ವಚ್ಚತೆ ಹಾಗೂ ಸಂಸ್ಕರಿಸಲು ಟೋಕನ್ ಲೆಕ್ಕದಲ್ಲಿ ಕೊಡಲಾಗುತ್ತಿತ್ತು. ಒಂದು ಟೋಕನ್ ಎಂದರೆ 5 ಕೆ.ಜಿ.ಯಷ್ಟು ಸಿಗಡಿ ಇರುತ್ತಿತ್ತು. ಸದ್ರಿ ಟೋಕನನ್ನು ನಾನು ಹಾಜರಾತಿ ಪುಸ್ತಕದಲ್ಲಿ ನನ್ನ ಅವಧಿಯಲ್ಲಿ ನಮೂದಿಸುತ್ತಿದ್ದೆ. ಸದ್ರಿ ದೇವಕಿಯವರು ಆ ಆಳುಗಳ ಹೆಸರನ್ನು ಅದರಲ್ಲಿ ಬರೆಯುತ್ತಿದ್ದರು.

2. ನಾನು ಎಷ್ಟು ಆಳುಗಳನ್ನು ನೀಡಿದ್ದಾರೆ ಎಂದು ಸ್ವತಹ ಲೆಕ್ಕ ಹಾಕುತ್ತಿರಲಿಲ್ಲ. ಆರೋಪಿ ಹೇಳಿದ ಆಳುಗಳ ಸಂಖ್ಯೆಯನ್ನು ಟೋಕನ್ ಲೆಕ್ಕದಲ್ಲಿ ನಮೂದಿಸುತ್ತಿದ್ದೆ. ಈ ಬಗ್ಗೆ ಪಿರ್ಯಾದಿಗೆ ಸಂಶಯ ಬಂದು ಆರೋಪಿ ಜೊತೆ ವೈಮನಸ್ಸಾಯಿತು. ಸದ್ರಿ ಫೋರಸ್ ಫುಡ್ಸ್ ಕಂಪನಿಯ ಮಾಲೀಕರಾದ ಬಾಸ್ಕರ್ ಶೆಟ್ಟಿರವರ ಜೊತೆ ಆ ಬಗ್ಗೆ ಪರಿಶೀಲನೆಯನ್ನು ಪಿರ್ಯಾದಿ ಮಾಡಿ ತಪ್ಪು ಲೆಕ್ಕ ಕೊಟ್ಟಿರುವುದನ್ನು ತಿಳಿದುಕೊಂಡರು. ಆ ನಂತರ ಸದ್ರಿ ಬಾಸ್ಕರ್ ಶೆಟ್ಟಿರವರ ಮುಂದೆ ಆರೋಪಿ ಮತ್ತು ಪಿರ್ಯಾದಿರವರ ನಡುವೆ ರಾಜಿ ಪಂಚಾಯತಿಯಾಗಿ, ಆರೋಪಿ ಪಿರ್ಯಾದಿಗೆ ಇಂತಿಷ್ಟು ಹಣ ನೀಡಬೇಕೆಂದು ತೀರ್ಮಾನಿಸಿಕೊಂಡಿದ್ದಾರೆ. ಆ ಪ್ರಕರವಾಗಿ ಆರೋಪಿ ಆ ಹಣಕ್ಕೆ ಪಿರ್ಯಾದಿಗೆ ಚೆಕ್ಕು ನೀಡಿರುತ್ತಾರೆ.

ಸಿ.ಸಿ. ನಂ.131/2022

(368/2018)

ಪಿ.ಡಬ್ಲ್ಯೂಃ 2

**ಪಾಟೀ ಸವಾಲುಃ** ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.